ಸ್ಪರ್ಧೆಯಾಗತೊಡಗಿದವು. ಇತ್ತೀಚೆಗೆ ವಿದೇಶದಲ್ಲಿ ಜನರು ಬಾಕ್ಸ್ ಬೇಬಿ ಪದ್ಧತಿಯ ಮೂಲಕವೇ ಮಕ್ಕಳನ್ನು ಪಡೆಯುತ್ತಿರುವುದಾಗಿಯೂ, ಶ್ರಮ, ವೇಳೆಯ ಸದುಪಯೋಗವನ್ನು ಗಮನದಲ್ಲಿಟ್ಟುಕೊಂಡು ಈ ಪದ್ಧತಿಯನ್ನು ಸಂಶೋಧಿಸಿರುವುದಾಗಿಯೂ ಡಾಕ್ಟರ್ ಅಗರ್ವಾಲ್ ಅವರು ಮೆಡಿಕಲ್ ಜರ್ನಲ್ ಒಂದರಲ್ಲಿ ಬರೆದಿದ್ದರು. ತಮ್ಮಲ್ಲಿ ಹುಟ್ಟಿಕೊಳ್ಳುತ್ತಿರುವ ಅನುಮಾನ, ಚಿತ್ರ ವಿಚಿತ್ರ ಪ್ರಶ್ನೆಗಳಿಗೆ ಉತ್ತರ ಸಿಗಲಾರದೇ ಮಹಾನಗರದ ಜನರು ರಾತ್ರಿಯೆಲ್ಲ ನಿದ್ರೆ ಇಲ್ಲದೆ ಮಗ್ಗಲು ಬದಲಾಯಿಸತೊಡಗಿದರು. ಆ ಭಾನುವಾರ ಯಾವಾಗ ಬರುವುದೆಂದು ಕ್ಷಣ ಗಣನೆಗೆ ತೊಡಗಿದರು.

ನೂತನವಾಗಿ ಆರಂಭಗೊಂಡಿದ್ದ ಡಾಕ್ಟರ್ ಅಗರ್ವಾಲ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಭಾನುವಾರ ಬೆಳಗಿನ ಹತ್ತು ಗಂಟೆಯಿಂದಲೇ ಗಿಜಿ ಗಿಜಿ ಎನ್ನತೊಡಗಿತು. ದಂಪತಿಗಳಿಗೆಲ್ಲ ಕುಳಿತುಕೊಳ್ಳಲು ಸೆಮಿನಾರ್ ಹಾಲ್‌ನಲ್ಲಿ ವ್ಯವಸ್ಥೆಯಾಗಿತ್ತು. ಹವಾನಿಯಂತ್ರಿತ ಹಾಲ್‌ನಲ್ಲಿ ಮಧುರವಾದ ಸಂಗೀತ ತೇಲಿ ಬರುತ್ತಿತ್ತು. ಹನ್ನೊಂದು ಗಂಟೆಯ ವೇಳೆಗೆ ಡಾಕ್ಟರ್ ಅಗರ್ವಾಲ್ ದಂಪತಿಗಳು ವೇದಿಕೆಯ ಮೇಲಿರುವ ಸೋಫಾದಲ್ಲಿ ಆಸೀನರಾದರು. ಆಸ್ಪತ್ರೆಯ ಜನರಲ್ ಮ್ಯಾನೇಜರ್ ಎಂದು ತಮ್ಮನ್ನು ತಾವು ಪರಿಚಯಿಸಿ ಕೊಂಡ ವ್ಯಕ್ತಿಯೊಬ್ಬರು ಡಾಕ್ಟರ್ ಅಗರ್ವಾಲ್ ದಂಪತಿಗಳನ್ನು ಕುರಿತಂತೆ ಕೂಲಂಕುಷವಾಗಿ ಪರಿಚಯಿಸಿದ್ದರು. 'ಮಗುವನ್ನು ಹೊಂದುವಲ್ಲಿ ಬರುವ ಸಮಸ್ಯೆಗಳು, ಮಗುವಿನ ಪಾಲನೆ ಪೋಷಣೆ ಇಂದಿನ ದಿನಗಳಲ್ಲಿ ಒಂದು ಸವಾಲಾಗಿದ್ದು, ಈ ನಿಟ್ಟಿನಲ್ಲಿ ಅಗರ್ವಾಲ್ ಆಸ್ಪತ್ರೆ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಇತ್ತೀಚಿನ ಸಂಶೋಧನೆಯಾದ ಬಾಕ್ಸ್ ಬೇಬಿ ಪದ್ಧತಿ ಅತ್ಯಂತ ಸರಳವಾದ ಹಾಗೂ ಮುಂದುವರಿದ ತಂತ್ರಜ್ಞಾನವಾಗಿದ್ದು ಎಲ್ಲ ವರ್ಗದ ಜನರಿಗೂ ನಿಲುಕುವಂತಹದ್ದಾಗಿದೆ ಎಂದು ಮ್ಯಾನೇಜರ್ ವಿವರಿಸುತ್ತ ಹೊರಟರು. ಈಗಾಗಲೇ ವಿದೇಶಗಳಲ್ಲಿ ಅನೇಕ ದಂಪತಿಗಳು ಈ ಪದ್ಧತಿಯನ್ನು ಅಳವಡಿಸಿಕೊಂಡು ಮಕ್ಕಳನ್ನು ಪಡೆದಿದ್ದಾಗಿಯೂ, ಅವರಲ್ಲಿ ಮೊದಲ ಬಾಕ್ಸ್ ಬೇಬಿಯನ್ನು ಪಡೆದ ದಂಪತಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದಾಗಿಯೂ ಹೇಳಿದರು. ಅಲ್ಲದೇ ಈ ಬಾಕ್ಸ್ ಬೇಬಿ ಕುರಿತಾಗಿ ಒಂದು ವೀಡಿಯೊ ಪ್ರದರ್ಶನವನ್ನೂ ತಾವು ನೋಡಲಿದ್ದೀರಿ. ಕೊನೆಯಲ್ಲಿ ಡಾಕ್ಟರ್ ಅಗರ್ವಾಲ್ ದಂಪತಿಗಳು ತಮ್ಮೊಂದಿಗೆ ಮಾತುಕತೆ ನಡೆಸುವ ಮೂಲಕ ತಮ್ಮ ಪ್ರಶ್ನೆಗಳಿಗೆಲ್ಲ ಉತ್ತರಿಸಲಿದ್ದಾರೆ'ಎಂದು ಮ್ಯಾನೇಜರ್ ಹೇಳಿ ಮುಂದಿನ ಕಾರ್ಯಕ್ರಮವಾದ ವೀಡಿಯೊ ಪ್ರದರ್ಶನಕ್ಕೆ ಅನುವು ಮಾಡಿ ಕೊಟ್ಟರು.

ಬಾಕ್ಸ್ ಬೇಬಿ ವೈದ್ಯಕೀಯ ಕ್ಷೇತ್ರದಲ್ಲೊಂದು ಮಹತ್ತರವಾದ ಸಾಧನೆ. ದಂಪತಿ ಒಂದೇ ಒಂದು ಬಾರಿ ವೈದ್ಯರಲ್ಲಿ ಹೋಗಿ ಅರ್ಧ ಗಂಟೆ ವ್ಯಯಿಸಿದರೆ ಸಾಕು. ಪ್ರಣಾಳ ಶಿಶುವಿನ ಮುಂದುವರೆದಿರುವ ಭಾಗದಂತಿರುವ ಪ್ರಕ್ರಿಯೆಯೇ ಬಾಕ್ಸ್ ಬೇಬಿ. ಗರ್ಭಕೋಶದ ಎಲ್ಲ ಅಂಶಗಳನ್ನೂ ಆಧಾರವಾಗಿಟ್ಟುಕೊಂಡು ತಯಾರಿಸಿದ ಈ ಗಾಜಿನ ಪೆಟ್ಟಿಗೆಯಲ್ಲಿ ಜೀವ ರಕ್ಷಕ ದ್ರಾವಣವೊಂದು ತುಂಬಿಕೊಂಡಿರುತ್ತದೆ. ಅದರೊಳಗೆ ಮಸ್ಲಿನ್ ಬಟ್ಟೆಯಂತಹ ತೆಳುವಾದ ತೇಲಾಡುವ ಚೀಲದ ರಚನೆ. ಪ್ರಣಾಳದಲ್ಲಿ ಬೆಳೆಸಿದ ಭ್ರೂಣವನ್ನು ನಿಗದಿತ ಅವಧಿಯಲ್ಲಿ ಈ ಚೀಲಕ್ಕೆ ವರ್ಗಾವಣೆ ಮಾಡಿದರೆ ವೈದ್ಯರ ಒಂದು ಹಂತದ ಕರ್ತವ್ಯ ಮುಗಿದಂತೆ. ಪತಿ ಪತ್ನಿ ಬಯಸಿದಲ್ಲಿ ಗಾಜಿನ ಪೆಟ್ಟಿಗೆಯನ್ನು ಮನೆಗೆ ಕೊಂಡೊಯ್ಯ ಬಹುದಾಗಿತ್ತು. ಆದರೆ ಶುಚಿತ್ವವಿಲ್ಲದ, ಅನಾರೋಗ್ಯಕರ ವಾತಾವರಣವಿದ್ದಲ್ಲಿ ವೈದ್ಯರು ತಮ್ಮ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿಯೇ ಬಾಕ್ಸ್ ಬೇಬಿಯನ್ನಿಟ್ಟುಕೊಂಡು ದಿನ ತುಂಬುವವರೆಗೂ ಅದರ ನಿಗಾ ವಹಿಸುತ್ತಿದ್ದರು. ದಿನಕ್ಕೆ ಎರಡು ಬಾರಿ ವೈದ್ಯರು ನೀಡಿದ ದ್ರಾವಣವನ್ನು ಬಾಕ್ಸ್‌ಗೆ ಜೋಡಿಸಲಾಗಿದ್ದ ನಳಿಕೆಗೆ ಇಂಜೆಕ್ಟ್ ಮಾಡಿದರೆ ಸಾಕಿತ್ತು. ಒಂಭತ್ತು ತಿಂಗಳು ಪೂರ್ಣಗೊಂಡಾಗ ತರಬೇತಿ ಹೊಂದಿದ ಆಸ್ಪತ್ರೆಯ ಸಿಬ್ಬಂದಿಗಳು ಬಾಕ್ಸ್‌ನಿಂದ ಮಗುವನ್ನು ಹೊರತೆಗೆದು ಮಗು ಸಹಜ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತಿದ್ದರು. ಅಲ್ಲಿಂದ ಆ ಮಗು ಸಾಮಾನ್ಯ ಜೀವನಕ್ಕೆ ತನ್ನನ್ನು ತಾನು ತೆರೆದುಕೊಳ್ಳುತ್ತಿತ್ತು.

ಮರುದಿನ ಮಹಾನಗರದ ಕೆಲ ಆಯಕಟ್ಟಿನ ಸ್ಥಳಗಳಲ್ಲಿ ಬಾಕ್ಸ್ ಬೇಬಿ ಪದ್ಧತಿಯನ್ನು ಖಂಡಿಸಿ ಮೆರವಣಿಗೆಗಳು ನಡೆದವು. ರಕ್ಷಣಾ ವೇದಿಕೆಯವರು, ಕೆಲ ಮಾನವತಾವಾದಿ ಸಂಘಟನೆಗಳವರು ಡಾಕ್ಟರ್ ಅಗರ್ವಾಲ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಮಕ್ಕಳ ಹಕ್ಕಿಗಾಗಿ ಹೋರಾಡುವ ಸಂಸ್ಥೆಗಳು ಅಗರ್ವಾಲರ ಪ್ರತಿಕೃತಿಗಳನ್ನು ದಹಿಸಿದರು. ಬುದ್ಧಿಜೀವಿಗಳು, ಸಾಹಿತಿಗಳು, ಹಿರಿಯ ತಲೆಗಳು ಈ ಸಂಶೋಧನೆಯ ವಿರುದ್ಧ ಪತ್ರಿಕೆಗಳಲ್ಲಿ ಹರಿಹಾಯ್ದರೆ, ಬಿಸಿ ರಕ್ತದವರು ಪರವಾಗಿ ಬರೆದರು. ಶಾಲಾ ಕಾಲೇಜುಗಳ ಚರ್ಚಾ ಸ್ಪರ್ಧೆಗಳಲ್ಲಿ ಬಾಕ್ಸ್ ಬೇಬಿ ಪದ್ಧತಿ ಹೊಸ ವಿಷಯವಾಗಿ ಸ್ಥಾನ ಪಡೆದುಕೊಂಡು ಕಾಲ್ಚೆಂಡಿನಂತೆ ಪರ ಹಾಗೂ ವಿರೋಧಗಳ ಮಧ್ಯದಲ್ಲಿ ಸಿಲುಕಿ ಒದ್ದಾಡತೊಡಗಿತು. ಸದಾ ಹೊಸತರ ಹಿಂದೆ ಬೆಂಬೀಳುವ ಟಿ.ವಿ. ಮಾಧ್ಯಮದವರು ಡಾಕ್ಟರ್ ಅಗರ್ವಾಲ್ ದಂಪತಿಗಳ ಡೇಟ್ಸ್‌ಗಳಿಗಾಗಿ ನಾ ಮುಂದೆ ತಾ ಮುಂದೆ ಎನ್ನತೊಡಗಿದರು. ಈ ಗಲಾಟೆಯ ಮಧ್ಯದಲ್ಲಿ ಹೆಸರಾಂತ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞರು ಸದ್ದಿಲ್ಲದಂತೆ ವಿದೇಶಕ್ಕೆ ಹಾರತೊಡಗಿದರು.

ಇಷ್ಟು ದಿನಗಳ ಕಾಲ ಕೇವಲ ಎಂ.ಟಿ.ಪಿ.ಯನ್ನೇ ನೆಚ್ಚಿಕೊಂಡು ನೋಣ ಹೊಡೆಯುತ್ತಿದ್ದ ಸಣ್ಣ ಪುಟ್ಟ ಪ್ರಸೂತಿ ಗೃಹಗಳು ಬಸುರಿಯರಿಂದ ಕಿಕ್ಕಿರಿಯತೊಡಗಿದವು. ಇಂಥ ವೈದ್ಯರೆಲ್ಲ ಡಾಕ್ಟರ್ ಅಗರ್ವಾಲ್‌ರಿಗೆ ಮನದಲ್ಲೇ ಕೃತಜ್ಞತೆಗಳನ್ನು ಸಲ್ಲಿಸತೊಡಗಿದರು. ದಿನ ನಿತ್ಯವೂ ಬಾಕ್ಸ್ ಬೇಬಿ ಪದ್ಧತಿಗಾಗಿ ನೂರಾರು ದಂಪತಿಗಳು ಅಗರ್ವಾಲ್ ಆಸ್ಪತ್ರೆಯಲ್ಲಿ ನೋಂದಣಿಯನ್ನು ಮಾಡಲಾರಂಭಿಸಿದರು. ಹೀಗಾಗಿ ಈ ಬಾಕ್ಸ್‌ಗಳ ಕೊರತೆಯುಂಟಾಗಲಾರಂಭಿಸಿತು. ವಿದೇಶದಲ್ಲಿ ತಯಾರಾಗುವ ಈ ವೈಜ್ಞಾನಿಕ ಬಾಕ್ಸ್‌ಗಳಿಗಾಗಿ ಡಾಕ್ಟರ್ ಅಗರ್ವಾಲ್‌ರವರು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಯನ್ನು ಸಲ್ಲಿಸಿದ್ದಾರೆಂದು ಮಹಾನಗರದ ಜನರು ಮಾತನಾಡಹತ್ತಿದರು. ಅಲ್ಲದೆ ಜನರು ಕೊಡುವ ದುಡ್ಡನ್ನಾಧರಿಸಿ ಬಾಕ್ಸ್ ಬೇಬಿ ಲಭ್ಯವಾಗುತ್ತಿವೆಯೆಂದೂ ಊಹಾಪೋಹಗಳು ಹರಿದಾಡತೊಡಗಿದವು. ಇದಕ್ಕೆ ಸಾಕ್ಷಿಯೆಂಬಂತೆ ಬಾಕ್ಸ್‌ಗಳು ಹೆಸರಾಂತ ನಟನಟಿಯರು, ರಾಜಕಾರಣಿಗಳು, ವ್ಯವಹಾರಸ್ಥರ ಪಾಲಾಗುತ್ತಿವೆ ಎಂದು ಮಾಧ್ಯಮದವರು ಭಿತ್ತರಿಸತೊಡಗಿದರು.

ಫಲಾನುಭವಿ ದಂಪತಿಗಳೆಲ್ಲ ಡಾಕ್ಟರ್ ಅಗರ್ವಾಲ್ ದಂಪತಿಗಳನ್ನು ಕೊಂಡಾಡುವವರೇ. ಒಂಭತ್ತು ತಿಂಗಳುಗಳ ಕಾಲ ಗರ್ಭದಲ್ಲಿ ಮಗುವನ್ನು ಇಟ್ಟುಕೊಳ್ಳುವುದೆಂದರೆ ಸಾಮಾನ್ಯವೆ? ವಾಂತಿ ಓಕರಿಕೆಗಳಿಂದ ಆರಂಭವಾಗಿ ಮಗು ಈ ಜಗತ್ತಿಗೆ ಬರುವವರೆಗೂ ಅದೆಷ್ಟೊಂದು ತಾಪತ್ರಯಗಳು? ಇಲ್ಲಿ ತಮ್ಮ ಮುದ್ದು ಕಂದನ ಬೆಳವಣಿಗೆಯನ್ನು ದಿನ ನಿತ್ಯ ಕಣ್ಣಾರೆ ಕಾಣಬಹುದು. ದುಡಿದು ದಣಿದು ಬಂದ ದಂಪತಿಗಳು ಗಾಜಿನ ಪೆಟ್ಟಿಗೆಯಲ್ಲಿ ತೇಲಾಡುವ ತಮ್ಮ ಕರುಳ ಕುಡಿಗಳನ್ನು ಮನದಣಿಯೇ ನೋಡಿ ತಮ್ಮ ಆಯಾಸವನ್ನು ಮರೆಯತೊಡಗಿದರು. ದಿನ ದಿನಕ್ಕೂ ಆರೋಗ್ಯದಿಂದೊಡಗೂಡಿ ಬೆಳೆಯುತ್ತಿರುವ ತಮ್ಮ ಮಗು ಗಂಡೋ ಹೆಣ್ಣೋ ಎಂದು ಕುತೂಹಲಕ್ಕೊಳಗಾಗ ತೊಡಗಿದರು. ತಮಗೆ ಬೇಕಾದ ಮಗುವನ್ನೇ ಡಾಕ್ಟರ್ ಅಗರ್ವಾಲ್ ಅವರು ಸೃಷ್ಟಿ ಮಾಡುವಂತಿದ್ದರೆ? ಒಂದಿಲ್ಲ ಒಂದು ದಿನ ವೈದ್ಯಕೀಯ ಕ್ಷೇತ್ರ ಅದನ್ನೂ ಸಾಧಿಸುವುದರಲ್ಲಿ ಸಫಲವಾದೀತೆಂದು ಮಹಾನಗರದ ಜನರು ಕನಸು ಕಾಣತೊಡಗಿದರು.

ಬಾಕ್ಸ್ ಬೇಬಿಯ ಪರಿಕಲ್ಪನೆ ಮಹಾನಗರದ ಜನರ ಭಾವನೆಗಳಿಗೂ ಲಗ್ಗೆ ಇಟ್ಟಿತು. ದೂರವಾದ ಮನಸುಗಳು ಹತ್ತಿರವಾಗತೊಡಗಿದರೆ, ಹತ್ತಿರವಿದ್ದ ಮನಸುಗಳು ದೂರವಾಗತೊಡಗಿದವು. ಪುಟ್ಟ ಅತಿಥಿಯೊಂದು ತಮ್ಮ ಮನೆಯಲ್ಲಿ ಹಂತ ಹಂತವಾಗಿ ಬೆಳೆಯುವುದನ್ನೇ ಕಾಣುತ್ತ ಗಂಡ ಹೆಂಡರು ತಮ್ಮ ಮಧ್ಯದ ವಿರಸವನ್ನು ಮರೆಯತೊಡಗಿದರು. ಬಯಕೆ ಬಸಿರುಗಳಿಲ್ಲದೇ ಕೈಗೆ ಬಂದು ಬೀಳುವ ಮಗು ಹೇಗೆ ತಾನೇ ಸಂತಸವನ್ನು ತಂದೀತು? ತನ್ನ ತಾಯಿಯ ಬೆಚ್ಚನೆಯ ಗರ್ಭದ ಗೂಡಿನಲ್ಲಿ ತೇಲುತ್ತ, ಆಕೆಯ ನೋವು–ನಲಿವು, ಅಳು–ನಗುವಿನ ಸಂವೇದನೆಗಳೊಂದಿಗೆ ಬೆರೆತು ಬೆಳೆಯಬೇಕಾದ

## ಗೆಳತಿ

ನನ್ನ ಎದೆಯಾಳದ
ನೋವು–ಬೇಸರಗಳಿಗೆ
ಕಷ್ಟ ನಷ್ಟಗಳಿಗೆ
ಹೆಗಲಾಗುವ
ಈ ಸೃಷ್ಟಿಯ ಬಳುವಳಿ!

★ ಡಾ.ವಿನಯ ಶ್ರೀನಿವಾಸ್



ಶಿಲ್ಪಾ ಕಬ್ಬಿಣಕಂತಿ